ಕೊಡದಾಗ ತುಂಬಲಿ, ನಾನ್ಯಾಕ ಬ್ಯಾಡನ್ಲಿ? ಆ ನೀರು ಯಾರೂ ಕುಡಿಯೂದಿಲ್ಲ. ನಮ್ಮ ಮಾತರ ಯಾರಿಗೆ ಕೇಳಬೇಕು? ಈ ಕತ್ತಲದಾಗ ನೀನು ಅಲ್ಲೆ, ನಾನು ಇಲ್ಲೆ ಕುಳಿತೀವಿ. ನಾನು ಮಾತಾಡ್ತೀನಿ, ನೀನು ಕೇಳಾಕ ಹತ್ತೀ. ದೇವರ ಜಗಲಿ ಮ್ಯಾಲಿನ ದೀಪ ಸಣ್ಣಗ ನಂದಾಕ ಹತ್ತೈತಿ. ಇನ್ನೇನು ಯಾವ ಗಳಿಗಿಗಾದ್ರೂ ಕಣ್ಣ ಮುಚ್ಚತ್ತ. ಆ ದೇವ್ರು ಕತ್ತಲದಾಗ, ನಾವೂ ಕತ್ತಲಾದಾಗ, ನಾವು ಮಾತಾಡೋದು ಕೂಡ ಕತ್ತಲದೊಳಗಿನ ಮಾತ ಆಗ್ತಾವು. ಕತ್ತಲದೊಳಗ ದೆವ್ವ ಮಾತಾಡ್ತಾವಂತ ಕೇಳೀನಿ, ನಾವೆಲ್ಲಾ ಬದುಕಿದ್ದೂ ದೆವ್ವ ಆದ್ವಿ. ಆದ್ಹಾಂಗ ಆಗ್ಲಿ. ಉಸರು ಎಣಿಸಬೇಕಲ್ಲ! ಇನ್ನೇನು ಆಟದ ಕೊನೆಗೆ ಅದೀವಿ. ಆಟ ಮುಗಿಯಾಕ ಹತ್ತೈತಿ, ಉಸರು ಸಾಲವಲ್ದು, ಉಸರ ಕಡಿಮಿ ಆದಾಗ ದೇಹದ್ದು, ಮನಸ್ಸಿಂದೂ ಏನೂ ನಡೆಯೊದಿಲ್ಲ. ತಿಳಿವಳಿಕಿ ಅನ್ನೂದು ಇದ್ದೂ ಇಲ್ಲದಂತ್ಹಾಗೋ ಕನಸಿನೊಳಗಿನ ಮಲ್ಲಾಡದ ಗಿಣಿ, ಅದಕ ಉಸಿರಿನ ಆಸರ ಇಲ್ದ ಹೋದ್ರ, ದೂರ ದೂರ ಹಾರಿಹೋಗತ್ತ, ಏನೂ ಸಂಬಂಧ ಇಲ್ಲ ಅಂತ ಹಾಡ್ತಾಹೋಗುತ್ತ."

"ಒಂದ ಕಾಲಕ್ಕ ಎರಡು ಬಿಸಿ ರೊಟ್ಟಿ, ಕಲ್ಲೊಳಗಿನ ಚಟ್ನಿ, ಅರ್ಧ ಚಮಚೆ ಎಣ್ಣೆ, ಸ್ವರ್ಗ ಕಟ್ಟಿ ಕೊಟ್ಟಿದ್ದವು. ಕೈರೊಟ್ಟಿ, ಶೇಂಗಾದ ಹಿಂಡಿ, ಬೆಳ್ಳುಳ್ಳಿ ಚಟ್ನಿ, ಖಾರಬೇಳೆ ದೊಡ್ಡ ಸುಖಭೋಗಗಳಾಗಿದ್ದವು. ಎಷ್ಟು ಸಾದಾ ಅನಿಸಿದರು ಎಷ್ಟು ಸವಿ, ಎಷ್ಟು ರುಚಿ ಆಗಿದ್ದವು! ಲೋಕದ ಸಕ್ಕರೆಯ ಎಲ್ಲ ಚೀಲ ತೂಕಕ್ಕೆ ಹಾಕಿದ್ರು, ಅವುಗಳ ಎದುರು ಅವು ನೆಲ ಕಚ್ಚತಿದ್ವು. ಆವಾಗ ಬದಕ ನೆಡಸಾಕ ದುಡ್ಡಿನ ಆವಶ್ಯಕತಾ ಇರಲಿಲ್ಲ, ಬರಿ ಪ್ರೀತಿನ ಸಾಕಾಗಿತ್ತು. ಬರ್ತಾಬರ್ತಾ ಎಲ್ಲಾ ಇದ್ದೂ ಒಣಗಿದ ನೆಲದ್ಹಾಂಗ ಆದಿವಿ... ಆದ್ರೂ ಇಲ್ಲಿಯ ಬದುಕು ಮರಿಯಾಕಾಗೋದಿಲ್ಲ!"

ಆಕೆಯ ನೆನಪುಗಳು, ನನ್ನ ಎದೆಯೇ ದಡವೆನ್ನುವಂತೆ ಒಂದೇ ಸಮನೆ ಅಪ್ಪಳಿಸುತ್ತಿದ್ದವು.

* * *

ಬೆಂಕಿ ಉರಿಯುತ್ತಿತ್ತು. ತಂಗಿಯ ದೇಹ ಬೂದಿಗೆ ತಿರುಗುತ್ತಿತ್ತು. ರಾಘವಾಚಾರ್ಯರು ನನ್ನನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ, ಕಲ್ಲು ಕಿತ್ತು ಹೋಗಿದ್ದ ಒಂದು ಕಟ್ಟೆಯ ಮೇಲೆ ಕೂಡ್ರಲು ಹೇಳಿದರು. ಅಲ್ಲಿ ತುಂಡಾದ ಹರಕು ಚೀಲವೊಂದು ಬಿದ್ದಿತ್ತು. ಅವರು ಗರುಡ ಪುರಾಣದ ಸಾರೋದ್ಧಾರ ಹೇಳಲು ಪ್ರಾರಂಭಿಸಿದರು. ಆಚಾರಧರ್ಮ, ಪ್ರೇತಬ್ರಹ್ಮಕಾಂಡಗಳ ಬಗ್ಗೆ ಹೇಳ ಹತ್ತಿದರು. ಮೃತ್ಯುವಿನ ಸಮಯ ಹಾಗೂ ಮೃತ್ಯುವಿನ ನಂತರ ಮಾಡಲಾಗುವ ಕರ್ಮ, ಪಾಪಾತ್ಮರಿಗೆ ರೌದ್ರರೂಪದಲ್ಲಿ ಹಾಗೂ ಪುಣ್ಯಾತ್ಮರಿಗೆ ಸೌಮ್ಯ ರೂಪದಲ್ಲಿ ಯಮನ ದರ್ಶನ, ಯಮದೂತರಿಂದ ಕೊಡಲ್ಪಡುವ ಯಾತನೆ ಸ್ವರೂಪ, ಶವದಹನದ ನಿಮಿತ್ತ ಪ್ರದಾನಿಸಲಾಗುವ ಆರು ಪಿಂಡಗಳ ಪ್ರಯೋಜನ, ಶವದಹನದ ವಿಧಾನ, ಸಂಕ್ಷೇಪದಲ್ಲಿ ದಶಾಹದಿಂದ ತ್ರಯೋದಶಾಹದವರೆಗಿನ ಕೃತ್ಯ, ಯಮ ಮಾರ್ಗದಲ್ಲಿ ಬರುವ ಹದಿನಾರು ಪುರಗಳು ಆ ಪುರಗಳ ವರ್ಣನೆ, ಜೀವದ ಯಮಪುರಿಯ ಪ್ರವೇಶ, ಪ್ರೇತಬಾಧೆಯ ಸ್ವರೂಪ, ಅನ್ಯದೇಹದ ಪ್ರಾಪ್ತಿ, ಪ್ರೇತಬಾಧಾ ಜನ್ಯ ವಿವಿಧ ಸ್ವಪ್ನ ಹಾಗು ಅವುಗಳ ಪ್ರಾಯಶ್ಚಿತ ವಿಧಾನ ಹಾಗು ಪ್ರೇತತ್ವ ಮುಕ್ತಿ ವಿಷಯದ ಬಗ್ಗೆ ವಿವರಿಸಿದರು. ಮೃತನ ಅಥವಾ ಮೃತಳ ದಹನದ ನಂತರ ಜೀವಾತ್ಮ ಶರೀರದ ಶೋಧನೆಯಲ್ಲಿರುತ್ತದೆ. ಅದು ಭೂಮಿಯ ಮೇಲೆಯೇ ಇರುತ್ತದೆ. ಒಂಭತ್ತು, ಹನ್ನೊಂದು, ಹದಿಮೂರು ದಿನಗಳ ಕ್ರಿಯೆಗಳು ಸಾಗುತ್ತವೆ. ಆದರೆ ಈ ಮಧ್ಯೆ ಜೀವಾತ್ಮ ಇಲ್ಲಿಯೇ ಇರುತ್ತದೆ ಎಂದು ಅವರು ಹೇಳಿದ್ದು ನನ್ನ ಕಿವಿಯಲ್ಲಿ